

ಮಾಡುತ್ತಿದ್ದನೋ ಏನೋ!? ಆದರೀಗ ಬದುಕು ಕಲಿಸಿದ ಪಾಠಗಳು ಆ ವೇಗವನ್ನು ತಗ್ಗಿಸಿಬಿಟ್ಟಿವೆ. ಒಂಥರಾ ಸ್ಥಿತಪ್ರಜ್ಞ ಮನೋಭಾವ ಮೂಡಿ, ತಣ್ಣಗೆ ಕೂರುವ ನಿರ್ಧಾರ ಮಾಡಿದರೂ, ಗೊತ್ತಿಲ್ಲದೇ ಬದುಕಲ್ಲಿ ಮೂರನೇ ಬಾರಿ ಎದೆಯಾಳದಲ್ಲಿ ಆ ಅಲೆಗಳ ಅಬ್ಬರ ಜಾಸ್ತಿಯಾಗುತ್ತಲೇ ಹೋಯ್ತು.

ಬಹಳ ವರ್ಷಗಳಾಗಿತ್ತಲ್ಲಾ, ಹೀಗಾಗದೇ...

ಬದುಕಲ್ಲಿ ಇನ್ನೊಮ್ಮೆ ಹೀಗಾಗಬಹುದು ಎಂದು ಇವನಂತೂ ಕನಸಲ್ಲಿ ಎಣಿಸಿರಲಿಲ್ಲ.

ಅದೂ ಈ ಹೊತ್ತಿನಲ್ಲಿ, ಈ ಕಾಲಘಟ್ಟದಲ್ಲಿ...

ಇವನಿರುವ, ಇವನಿದ್ದ ಈ ಸನ್ನಿವೇಶದಲ್ಲಿ ಅದು ಸಾಧ್ಯವೇ ಇರಲಿಲ್ಲ.

ನಿನ್ನೆ ನಡುರಾತ್ರಿ.

ಬೆಂಗಳೂರಿನ ಮನೆಯ ಏರ್ ಕಂಡೀಷನ್ಡ್ ಕೋಣೆಯಲ್ಲಿ ಒಬ್ಬನೇ ತಣ್ಣಗೆ ಮಲಗಿದ್ದ ಇವನ ಮೊಬೈಲ್ ಹೊಡೆದುಕೊಂಡಾಗ, ಕತ್ತಲೆಯಲ್ಲಿಯೇ ಕರೆ ಸ್ವೀಕರಿಸಿದ್ದ. ಆ ಕಡೆಯಿಂದ ಚಿಕ್ಕಪ್ಪನ ಮಗ, ಕಿರಿ ತಮ್ಮ, 'ಹುಬ್ಬಳ್ಳಿಯ ಅಣ್ಣ ನೇಣು ಹಾಕಿಕೊಂಡ. ವಿಷಯ ತಿಳಿದ ಕೂಡಲೇ ಹೊರಟೆ. ಬೆಳಗ್ಗೆ ಅಲ್ಲಿ ಎಲ್ಲ ಮುಗಿಸಿ ನಾಳೆ ಸಂಜೆಯೊಳಗೆ ಊರಿಗೆ